# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕೆಂಪೇಗೌಡನಗರ ಉಪವಿಭಾಗ
ಚಿಕ್ಕಪೇಟೆ ವಿಭಾಗ, ಬೆಂಗಳೂರು.

ಸ.ಕಾ.ನಿ.ಅ(ಕೆ.ಗೌ.ನ)ಪಿ.ಆರ್/231/2021-22. ದಿನಾಂಕ : 23-9-2021

ದಿನಾಂಕ: 20-09-2021 ರಂದು ಈ ಉಪವಿಭಾಗದ ವಾರ್ಡ್ ಸಂಖ್ಯೆ 143ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಈ ಕೆಳಕಂಡಂತಿರುತ್ತದೆ.

ಉಪಸ್ಥಿತರು:

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ. ಉಮಾಶಂಕರ್ | ನೋಡಲ್ ಅಧಿಕಾರಿಗಳು ಹಾಗೂ ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ) | 9480684418 |
| 2 | ಶ್ರೀಮತಿ. ಶಿಲ್ಪ.ಎನ್ | ಕಾರ್ಯದರ್ಶಿ ಹಾಗೂ ಕಿರಿಯ ಅಭಿಯಂತರರು ವಾರ್ಡ್ ಸಂಖ್ಯೆ:143 | 9480688143 |
| 3 | ಶ್ರೀ.ಎಸ್.ಹೇಮಂತ್ ಕುಮಾರ್ | ಸಹಾಯಕ ಅಭಿಯಂತರರು ಬೆಸ್ಕಾಂ | 9449870535 |
| 4 | ಶ್ರೀ.ಪಿ.ನರಸಿಂಹ | ಕಿರಿಯ ಆರೋಗ್ಯ ಪರಿವೀಕ್ಷಕರು | 9964177663 |
| 5 | ನವೀನ್ .ಜಿ | ಕೆಲಸ ಪರಿವೀಕ್ಷಕರು (TEC) | 8971318650 |
| 6 | ನವೀನ್ | BWSSB | 9880359497 |
| 7 | ಕೆ.ರಮೇಶ್ | ಸ.ಕಾ.ಇಂ (Project) | 9686128568 |
| 8 | ಮಹೇಶ್ ಕುಮಾರ್ | ಸ.ಅ (Project) | 9880654554 |
| 9 | ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 8217636732 |
| 10 | ಶ್ರೀ.ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9901066586 |
| 11 | ಎಂ.ಎಂ.ಪಿ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448387878 |
| 12 | ಚಿಕ್ಕಣ್ಣ ಗಾರ್ಡನ್ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್ | ಸದಸ್ಯರು | 9448508638 |

ದಿನಾಂಕ: 20-09-2021 ರಂದು ನಡೆದ ವಾರ್ಡ್ -143 ರ ಸಮಿತಿ ಸಭೆಯ ನಡಾವಳಿಗಳು:

ಮಾನ್ಯ ನೋಡಲ್ ಅಧಿಕಾರಿಗಳು ಹಾಗೂ ಅಧ್ಯಕ್ಷರು ರವರ ಅನುಮತಿಯೊಂದಿಗೆ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಸಭೆಯಲ್ಲಿ ಹಾಜರಿದ್ದ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ಗಳ ಅಧ್ಯಕ್ಷರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಸ್ವಾಗತಿಸುವ ಮೂಲಕ ಸಭೆಯನ್ನು ಪ್ರಾರಂಭಿಸಲಾಯಿತು.

ನಂತರ ನೋಡಲ್ ಅಧಿಕಾರಿಗಳು ವಾರ್ಡ್‌ಗೆ ನೂತನವಾಗಿ ನಿಯೋಜನೆಗೊಂಡಿರುವ ಕಿರಿಯ ಅಭಿಯಂತರರಾದ ಶ್ರೀಮತಿ. ಶಿಲ್ಪಿ.ಎನ್.ರವರನ್ನು ಸಭೆಗೆ ಪರಿಚಯಿಸಿ ಶುಭಾಶಯಗಳನ್ನು ತಿಳಿಸಿದರು.

ನಂತರ ಎಂ.ಎಂ.ವಿ.ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಶ್ರೀ.ವೆಂಕಟೇಶ್ ರವರು ಮಾತನಾಡಿ ನೂತನವಾಗಿ ನಿಯೋಜನೆಗೊಂಡಿರುವ ಕಿರಿಯ ಅಭಿಯಂತರರಿಗೆ ಶುಭಾಷಯಗಳನ್ನು ತಿಳಿಸಿದರು ಹಾಗೂ ಎಂ.ಎಂ.ವಿ.ರಸ್ತೆ ಮತ್ತು ವಾಣಿ ವಿಲಾಸ ರಸ್ತೆಗಳು ಸೇರುವ ವಾಸವಿ ವಿದ್ಯಾನಿಕೇತನ ಬಳಿ ಶೇಖರಣೆಯಾಗಿದ್ದ ಡೆಬ್ರೀಸ್ ಮತ್ತು ಕಸವನ್ನು ತೆರವುಗೊಳಿಸಿ ಸ್ವಚ್ಛ ಮಾಡಿರುವುದಕ್ಕೆ ಮತ್ತು BBMP HELP LINE 1533 ಗೆ ದೂರು ನೀಡಿದ್ದ ಸಂಬಂಧ ಬೀದಿ ದೀಪಗಳನ್ನು ರಿಪೇರಿ ಮಾಡಿರುವುದಕ್ಕೆ ಧನ್ಯವಾದಗಳನ್ನು ತಿಳಿಸಿದರು. ಮುಂದುವರೆದು ಶ್ರೀ.ವೆಂಕಟೇಶ್ ರವರು ಮಾತನಾಡಿ ವಿ.ವಿ.ಪುರಂ ರೆಸಿಡೆಂಟ್ಸ್‌ಯಲ್ ಅಸೋಸಿಯೇಷನ್ ಎಂ.ಬಿ.ಸಂಸ್ಥೆಯು ರಿಜಿಸ್ಟರ್ ಆಗಿದ್ದು ಮುಂದಿನ ವಾರ್ಡ್ ಸಮಿತಿ ಸಭೆಗೆ ಆಹ್ವಾನಿಸುವಂತೆ ಸಭೆಯಲ್ಲಿ ಕೋರಿದರು. ಈ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ನೋಡಲ್ ಅಧಿಕಾರಿಗಳು ಕಿರಿಯ ಅಭಿಯಂತರರಿಗೆ ಸೂಚಿಸಿದರು.

ನಂತರ ಪುನಃ ಶ್ರೀ.ವೆಂಕಟೇಶ್ ರವರು ಮಾತನಾಡಿ ಕೆ.ವಿ ಲಕ್ಷ್ಮೀಶ ರಸ್ತೆ ಹಾಗೂ ಕೆ.ಆರ್.ರಸ್ತೆಗಳಿಗೆ ಹೊಂದಿಕೊಂಡಿರುವ ಬಿಬಿಎಂಪಿ ಯ ಜಾಗದಲ್ಲಿ ತ್ಯಾಜ್ಯಕ್ಕೆ ಸಂಬಂಧಿಸಿದ ನಿರ್ಮಿಸಲು ಉದ್ದೇಶಿಸಿದ್ದು, ಸದರಿ ಸ್ಥಳದ ಅಕ್ಕ ಪಕ್ಕ ಶಾಲೆ, ಕಾಲೇಜ್, ಹೋಟೆಲ್‌ಗಳು ಮತ್ತು ವಾಸಿಸುವ ಮನೆಗಳಿದ್ದು ಇದರಿಂದ ತುಂಬಾ ತೊಂದರೆಯಾಗುವುದರಿಂದ ಈ ಸ್ಥಳದಲ್ಲಿ Transfer Station ನಿರ್ಮಿಸಬಾರದೆಂದು ಸಭೆಯ ಗಮನಕ್ಕೆ ತಂದರು. ಈ ವಿಷಯವಾಗಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ-ಚಿಕ್ಕಪೇಟೆ) ರೊಂದಿಗೆ ಚರ್ಚಿಸುವುದಾಗಿ ನೋಡಲ್ ಅಧಿಕಾರಿಗಳು ಸಭೆಗೆ ತಿಳಿಸಿದರು. ಮುಂದುವರೆದು ಮಾತನಾಡಿ ವಿ.ವಿ.ಪುರಂ ವಾರ್ಡ್‌ನ ಸಜ್ಜನರಾವ್ ವೃತ್ತದಲ್ಲಿ ಹನುಮಂತ ದೇವಸ್ಥಾನ ಹಿಂಭಾಗದಲ್ಲಿ ಬಯಲು ರಂಗ ಮಂದಿರ ನಿರ್ಮಿಸಿಕೊಡುವಂತೆ ಕೋರಿದರು. ಈ ಸಂಬಂಧ ಪರಿಶೀಲಿಸಿ ಕ್ರಮ ಕೈಗೊಳ್ಳುವಂತೆ ಕಿರಿಯ ಅಭಿಯಂತರರಿಗೆ ನೋಡಲ್ ಅಧಿಕಾರಿ ತಿಳಿಸಿದರು. ಮತ್ತು ವಾರ್ಡ್ ಸಮಿತಿಗೆ ಮೀಸಲಿಟ್ಟಿರುವ 60 ಲಕ್ಷ ರೂಗಳ ಅನುದಾನದಲ್ಲಿ ಯಾವ, ಯಾವ ಕಾಮಗಾರಿ ಕೈಗೊಳ್ಳಬೇಕೆಂಬುದನ್ನು ಪಟ್ಟಿ ಮಾಡಿ ಜರೂರಾಗಿ ಕಾಮಗಾರಿ ಕೈಗೊಳ್ಳಬೇಕೆಂದು ಸಭೆಯಲ್ಲಿ ತಿಳಿಸಿದರು. ಈ ವಿಚಾರವಾಗಿ ಕೂಡಲೇ ಕ್ರಮ ವಹಿಸುವಂತೆ ನೋಡಲ್ ಅಧಿಕಾರಿಗಳು ವಾರ್ಡ್‌ನ ಅಭಿಯಂತರರಿಗೆ ಸೂಚಿಸಿದರು. ಪುನಃ ವೆಂಕಟೇಶ್ ರವರು ಮಾತನಾಡಿ ಎಂ.ಎಂ.ವಿ. ರಸ್ತೆ, ಶ್ರೀ ಶಂಕರ್ ಸ್ವಾಮಿ ಹೌಸ್ ಮುಂಭಾಗ ಸಿ.ಸಿ.ಟಿ.ವಿ.ಕ್ಯಾಮರಾ ಹಾಕುವಂತೆ ಹಾಗೂ ಎಂ.ಎಂ.ವಿ. ರಸ್ತೆ ನ್ಯಾಷನಲ್ ಹೈ ಸ್ಕೂಲ್ ರಸ್ತೆಗಳು ಸೇರುವ ಸ್ಥಳದಲ್ಲಿ Road Hump ಹಾಕುವಂತೆ ಕೋರಿದರು. ಈ ಸಂಬಂಧ ಸಿ.ಸಿ.ಟಿ.ವಿ. ಬಗ್ಗೆ ವಾರ್ಡ್‌ನ

ಅಭಿಯಂತರರಿಗೆ ಹಾಗೂ Road Hump ಬಗ್ಗೆ TEC ಅಧಿಕಾರಿಗಳಿಗೆ ಸೂಕ್ತ ಕ್ರಮ ವಹಿಸುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ನಂತರ ಬಸವನಗುಡಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಶ್ರೀ.ರಾಜು ರವರು ಮಾತನಾಡಿ ಶ್ರೀರಾಮ ಮಂದಿರ ರಸ್ತೆ, ಕನ್ಸರ್ವೆನ್ಸಿಯಲ್ಲಿ ಹಸುಗಳನ್ನು ಕಟ್ಟುತ್ತಿರುವ ಬಗ್ಗೆ,ಕೆ.ಆರ್. ರಸ್ತೆ ಪಾದಚಾರಿ ಮಾರ್ಗದಲ್ಲಿರುವ ನರ್ಸರಿ ಬಗ್ಗೆ ಮತ್ತು ಆರ್.ವಿ. ರಸ್ತೆ, ಕನಕಪುರ ರಸ್ತೆಗಳಲ್ಲಿ ಹಾಗೂ ಕೆ.ಆರ್. ರಸ್ತೆಗಳಲ್ಲಿ ಮರಗಳ ಸುತ್ತಲೂ ಎತ್ತರದ ಕಟ್ಟೆಯನ್ನು ಕಟ್ಟಿಕೊಂಡಿದ್ದು ಯಲ್ಲಪ್ಪ ರೆಡ್ಡಿ ಕಮಿಟಿಯ ವರದಿಯ ಪ್ರಕಾರ ಮರಗಳ ಬಾಂಡುಗಳಿಗೆ ತೊಂದರೆಯಾಗುವುದರಿಂದ ಇವುಗಳನ್ನು ತೆರವುಗೊಳಿಸಬೇಕೆಂದು ತಿಳಿಸಿದರು. ಈ ವಿಷಯವಾಗಿ ಸಭೆಯಲ್ಲಿ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ವಾರ್ಡ್‌ನ ಅಭಿಯಂತರರಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು. ಮಾತು ಮುಂದುವರೆಸಿ ಶ್ರೀ. ರಾಜು ರವರು ಆರ್.ವಿ.ರಸ್ತೆ ಟೀಚರ್ಸ್ ಕಾಲೇಜ್ (ಮೆಟ್ರೋ ನಿಲ್ದಾಣ) ಬಳಿ ಇದ್ದ ಹಳೆಯ ಬಸ್ ಶೆಲ್ಟರ್ ಅನ್ನು ತೆರವುಗೊಳಿಸಿದ್ದು ಸದರಿ ಸ್ಥಳದಲ್ಲಿಯೇ ಹೊಸ ಬಸ್ ಶೆಲ್ಟರ್‌ಅನ್ನು ನಿರ್ಮಾಣ ಮಾಡಬೇಕೆಂದು ತಿಳಿಸಿದರು. ಈ ಸಂಬಂಧ ಕ್ರಮಕೈಗೊಳ್ಳುವಂತೆ ಸಭೆಯಲ್ಲಿ ಹಾಜರಿದ್ದ ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ನ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು. ಪುನಃ ಶ್ರೀ.ರಾಜು ರವರು ಮಾತನಾಡಿ ಸರ್ವೇಯರ್ ರಸ್ತೆಯ ಕನ್ಸರ್ವೆನ್ಸಿಯಲ್ಲಿ ಅಂಬಾ ಭವಾನಿ ನಾನ್ ವೆಜ್ ಹೋಟೆಲ್ ನಡೆಸುತ್ತಿದ್ದು ಸದರಿ ಹೋಟೆಲ್ ಅನ್ನು ಮುಚ್ಚಿಸುವಂತೆ ತಿಳಿಸಿದರು. ಈ ವಿಚಾರವಾಗಿ ಚಿಕ್ಕಪೇಟೆ ಆರೋಗ್ಯ ವೈದ್ಯಾಧಿಕಾರಿಗಳನ್ನು ನಾನ್ ವೆಜ್ ಹೋಟೆಲ್ ಅನ್ನು ಮುಚ್ಚಿಸುವ ಸಂಬಂಧ ಕ್ರಮ ಕೈಗೊಳ್ಳುವಂತೆ ಕೋರುವುದಾಗಿ ನೋಡಲ್ ಅಧಿಕಾರಿಗಳು ಸಭೆಯ ಗಮನಕ್ಕೆ ತಂದರು.

ನಂತರ ರಾಮಯ್ಯಂಗಾರ್ ರಸ್ತೆ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಷನ್‌ನ ಶ್ರೀ.ಟಿ.ವಿ.ಜಯಕುಮಾರ್ ರವರು ಮಾತನಾಡಿ ಈ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾಗಿದ್ದ ವರ್ಮಿ ಕಾಂಪೋಸ್ಟ್, ಆಗಾಗ ವಿದ್ಯುತ್ ಕಡಿತವಾಗುವುದು. ಮತ್ತು ರಾಮಯ್ಯಂಗಾರ್ ರಸ್ತೆ(ಡಯಾಗನಲ್ ರಸ್ತೆ ಕಡೆಯಿಂದ)ಯಲ್ಲಿ ಅವೈಜ್ಞಾನಿಕವಾಗಿ ಹಾಕಿರುವ Road Hump ಅನ್ನು ತೆರವುಗೊಳಿಸುವಂತೆ ಮತ್ತು ವಾಣಿ ವಿಲಾಸ ರಸ್ತೆ ನ್ಯಾಷನಲ್ ಕಾಲೇಜ್ ಮೇಲು ಸೇತುವೆ ಬಳಿ ರಸ್ತೆ ಹಾಳಾಗಿದ್ದು, ಸರಿಪಡಿಸುವಂತೆ ತಿಳಿಸಿದರು. ಈ ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚಿಸಿ ಇವುಗಳಿಗೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರು. ಬೆಸ್ಕಾಂ ಅಭಿಯಂತರರು ಮತ್ತು ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ TEC ಅಧಿಕಾರಿಗಳು ಹಾಗೂ ಮೇಜರ್ ರೋಡ್ಸ್‌ನ ಅಧಿಕಾರಿಗಳಿಗೆ ಸೂಕ್ತ ಕ್ರಮ ವಹಿಸುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು.

ನಂತರ ಕಾರ್ಯದರ್ಶಿಗಳ ವಂದನಾರ್ಪಣೆಯೊಂದಿಗೆ ವಾರ್ಡ್ ಸಮಿತಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

23/9/21
ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ -143 ವಿ. ವಿ.ಪುರಂ

ನೋಡಲ್ ಅಧಿಕಾರಿಗಳು 23/9/21
ವಾರ್ಡ್ ಸಂಖ್ಯೆ: 143 ಹಾಗೂ
ಉಪನಿರ್ದೇಶಕರು ನಗರ ಯೋಜನೆ (ದಕ್ಷಿಣ)